ಓ.ಎಸ್.ನಂ.**68/2014**

ಪಿಡಬ್ಲ್ಯೂ **.1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **11.02.2026**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಮ್.ಸಿ.ಜೆ. ವಕೀಲರಿಂದ**

ನಾನು ಡಿಪ್ಲೋಮೋ ಓದಿದ್ದೇನೆ. ಈ ದಾವೆಯನ್ನು ಲಕ್ಷ್ಮಮ್ಮ ಹಾಕಿದ್ದಾರೆ. ಅವರ ವಾರಸುದಾರರು ಈ ಕೇಸನ್ನು ಹಾಕಿದ್ದಾರಾ? ಎಂದರೆ ಇಲ್ಲ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇದೆ. ಈ ದಾವೆ ನಡೆಸಲು ನನಗೆ ವಾದಿಯು 2014ರಲ್ಲಿ ಜಿಪಿಎ ಕೊಟ್ಟಿದ್ದಾರೆ. ವಾದಿಗೆ ಆರೋಗ್ಯ ಸರಿ ಇಲ್ಲದೆ ಇರುವ ಕಾರಣ ನನಗೆ ಜಿಪಿಎ ಕೊಟ್ಟಿದ್ದಾರೆ. ವಾದಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿದ್ದೀರಾ? ಎಂದರೆ ಹೌದು. ನಾನು ವೈದ್ಯಕೀಯ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ನಾನು ಯಾವುದೇ ವೈದ್ಯಕೀಯ ದಾಖಲಾತಿಯನ್ನು ಕೊಟ್ಟಿಲ್ಲ ಎಂದರೆ ಸರಿ ಅಲ್ಲ. ಜಿಪಿಎ ಪತ್ರದಲ್ಲಿ ಬರೆದಿರುವ ಅಂಶದ ಬಗ್ಗೆ ನನಗೆ ಮಾಹಿತಿ ಇದೆ. ಯಾವ ಸ್ವತ್ತಿಗೆ ಸಂಬಂಧಿಸಿದಂತೆ, ಯಾವ ದಾವೆಯಲ್ಲಿ ಮತ್ತು ಯಾರ ವಿರುದ್ಧ ಹಾಕಿರುವ ದಾವೆಯಲ್ಲಿ ಕೇಸ್ ನಡೆಸುವಂತೆ ನನಗೆ ಅಧಿಕಾರ ಕೊಟ್ಟಿರುವ ಬಗ್ಗೆ ಜಿಪಿಎ ಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿ. ನಿ.ಪಿ.1 ಈ ದಾವೆಗೆ ಸಂಬಂಧಿಸಿದಲ್ಲ ಎಂದರೆ ಸರಿ ಅಲ್ಲ. ನಿ.ಪಿ.1ಕ್ಕೆ ವಾದಿಯು ಸಹಿ ಮಾಡಿದ್ದಾರೆ. ಅವರನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯು ಆರೋಗ್ಯವಾಗಿದ್ದರೂ ಕೂಡ ನ್ಯಾಯಾಲಯಕ್ಕೆ ಸತ್ಯಾಂಶ ತಿಳಿಯುತ್ತದೆ ಎಂಬ ಕಾರಣಕ್ಕೆ ನಾನು ಜಿಪಿಎ ಬರೆಸಿಕೊಂಡು ಬಂದು ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ದಾವಾ ಆಸ್ತಿಯು ಅವರಿಗೆ ಸೇರಿದ್ದು ಎಂದು ಪರಿಹಾರ ಕೇಳಿದ್ದಾರೆ. ಈ ದಾವೆಯನ್ನು ಮುತ್ತುರಾಯಪ್ಪ, ಹನುಮಂತರಾಯಪ್ಪ

ಮತ್ತು ದಾನಪ್ಪ ನವರ ವಿರುದ್ಧ ಹಾಕಿದ್ದಾರೆ. ದಾವಾ ಆಸ್ತಿಯ ಸರ್ವೇ ನಂಬರ್, ವಿಸ್ತೀರ್ಣ, ಚೆಕ್‌ಬಂಧಿ ಗೊತ್ತು. ಅದರ ಸರ್ವೇ ನಂಬರ್. ¼ ಮತ್ತು ವಿಸ್ತೀರ್ಣ 3 ಎಕರೆ 18 ಗುಂಟೆ ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಸರ್ಕಾರಿ ಒಣಿ, ಪಶ್ಚಿಮಕ್ಕೆ ಹನುಮಕ್ಕನ ಸ್ವತ್ತು, ಉತ್ತರಕ್ಕೆ ನಾರಾಯಣಪ್ಪ ಮತ್ತು ಮುತ್ತುರಾಯಪ್ಪ ನವರ ಸ್ವತ್ತು ದಕ್ಷಿಣಕ್ಕೆ ಶಾನುಭೋಗ್ ಇನಾಮ್ತಿ ಜಮೀನು ಮತ್ತು ಗಂಗಣ್ಣ, ಬೈರಣ್ಣ ಮತ್ತು ರಂಗಮುತ್ತಯ್ಯನವರ ಜಮೀನು ಇದೆ. ಈ ದಾವೆ ಹಾಕುವ ಕಾಲಕ್ಕೆ ದಾವಾ ಆಸ್ತಿಗೆ ಸಂಬಂಧಿಸಿದಂತೆ 1 ಎಕರೆಗೆ ಎಷ್ಟು ಸರ್ಕಾರಿ ಮೌಲ್ಯ ಇತ್ತು ಎಂದರೆ ಗೊತ್ತಿಲ್ಲ. ಅಂದಾಜು 5ಲಕ್ಷ ಇತ್ತಾ ಎಂದರೆ? ಇರಬಹುದು. ಈಗ ಒಂದು ಎಕರೆಗೆ 25 ರಿಂದ 30 ಲಕ್ಷ ಬೆಲೆ ಇದೆ ಎಂದರೆ ಇರಬಹುದು. ಮಾರುಕಟ್ಟೆಯ ಬೆಲೆಗೆ ಸರಿಯಾದ ನ್ಯಾಯಾಲಯದ ಶುಲ್ಕ ಕಟ್ಟಿದ್ದೀರಾ? ಎಂದರೆ ಹೌದು. ಪ್ರತಿವಾದಿಗಳು ಸಲ್ಲಿಸಿದ ಪ್ರತಿವಾದ ಪತ್ರ ಮತ್ತು ದಾಖಲಾತಿಗಳ ಬಗ್ಗೆ ತಿಳಿದುಕೊಂಡಿದ್ದೀರಾ? ಎಂದರೆ ಇಲ್ಲ.

ವಾದಿಯ ತಂದೆಯ ಹೆಸರು ನರಸಿಂಹಯ್ಯ ಮತ್ತು ತಾಯಿಯ ಹೆಸರು ರಂಗಮುತ್ತಮ್ಮ ಎಂದರೆ ಸರಿ. ನರಸಿಂಹಯ್ಯನವರಿಗೆ ಲಕ್ಷ್ಮಮ್ಮ ಮತ್ತು ಮುತ್ತಮ್ಮ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ವಾದಿಯ ಗಂಡನ ಮುತ್ತುರಾಯಪ್ಪ ಎಂದರೆ ಸರಿ. ವಾದಿಗೆ ಪುಟ್ಟನರಸಮ್ಮ ಮತ್ತು ಸಿದ್ದಗಂಗಯ್ಯ ಎಂಬ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ. ಸಿದ್ಧಗಂಗಯ್ಯನವರಿಗೆ ನಾಗರತ್ನಮ್ಮ ಹೆಂಡತಿ ರಮ್ಯ ಎಂಬ ಮಗಳು ಇದ್ದಾರೆ ಎಂದರೆ ಸರಿ. ಮುತ್ತಮ್ಮನ ಗಂಡನ ಹೆಸರು ಹನುಮಂತರಾಯಪ್ಪ ಎಂದರೆ ಗೊತ್ತಿಲ್ಲ. ಅದೇ ಹನುಮಂತರಾಯಪ್ಪನವರು ಈ ಕೇಸಿನ 2ನೇ ಪ್ರತಿವಾದಿ ಎಂದರೆ ಗೊತ್ತಿಲ್ಲ. ಅವರಿಗೆ ಮುತ್ತುರಾಜು ಎಂಬ ಮಗನಿದ್ದಾನೆ ಎಂದರೆ ಸಾಕ್ಷಿಯು ಹನುಮಂತರಾಯಪ್ಪನ 2ನೇ ಹೆಂಡತಿಗೆ ಮುತ್ತುರಾಜು ಎಂಬ ಮಗನಿದ್ದಾನೆ ಎಂದು ಹೇಳುತ್ತಾರೆ. ವಾದಿಯು ಅವರನ್ನು ಹೊರತುಪಡಿಸಿ ಅವರ ಕುಟುಂಬದ ಇತರೆ ಸದಸ್ಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ

ಸರಿ. ನರಸಿಂಹಯ್ಯನವರ ವಾರಸುದಾರರನ್ನು ಈ ಕೇಸಿನಲ್ಲಿ ಸೇರಿಸಲು ತೊಂದರೆ ಇದೇಯಾ ಎಂದರೆ ಸಾಕ್ಷಿಯು ಪ್ರತಿವಾದಿಗಳು ನಮಗೆ ತೊಂದರೆ ಕೊಡುತ್ತಿದ್ದ ಕಾರಣ ಅವರ ವಿರುದ್ಧ ಈ ಕೇಸನ್ನು ಹಾಕಿದ್ದೇವೆ. ಸಾಕ್ಷಿಯು ಮುಂದುವರೆದು ನರಸಿಂಹಯ್ಯನವರಗೆ ಒಬ್ಬಳೇ ಮಗಳಿದ್ದು ಅವರೇ ಈ ಕೇಸನ್ನು ಹಾಕಿದ್ದಾರೆ ಎಂದು ಹೇಳುತ್ತಾರೆ. ಈ ರೀತಿ ವಾದಿಯು ಒಬ್ಬಳೇ ಮಗಳು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿದ್ದೇನೆ. ನಾನು ಯಾವುದೇ ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಯು ನರಸಿಂಹಯ್ಯನ ಮಗಳು ಎಂದು ತೋರಿಸಲು ಸರ್ಕಾರಿ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ? ಎಂದರೆ ಇಲ್ಲ. ವಾದಿಯ ತಂದೆ-ತಾಯಿ ಯಾವಾಗ ಮೃತ ಪಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳ ತಾತನ ಹೆಸರು ಶಿವನಯ್ಯ ಎಂದರೆ ಗೊತ್ತಿಲ್ಲ. ಶಿವನಯ್ಯನವರಿಗೆ 3 ಜನ ಮಕ್ಕಳಿದ್ದಾರೆ ಎಂದರೆ ಸರಿ. ಅವರುಗಳೆಂದರೆ ಗಂಗಯ್ಯ, ಬಂಡ್ಯಪ್ಪ, ಮರಿಯಪ್ಪ ಎಂದರೆ ಸರಿ. ಈ ಕೇಸಿನ ಪ್ರತಿವಾದಿಗಳು ಸದರಿ ಬಂಡ್ಯಪ್ಪನ ಮಕ್ಕಳು ಎಂದರೆ ಗೊತ್ತಿಲ್ಲ. ನಿಮಗೂ ಮತ್ತುಪ್ರತಿವಾದಿಗಳಿಗೂ ಸಂಬಂಧವಿದೆಯಾ ಎಂದರೆ ಇಲ್ಲ . ವಾದಿಯ ತಂದೆ ನರಸಿಂಹಯ್ಯನವರಿಗೆ ಮತ್ತು ಶಿವನಯ್ಯನವರಿಗೆ ಸಂಬಂಧವಿದೆಯಾ ಎಂದರೆ ಇಲ್ಲ.

ದಾವಾ ಆಸ್ತಿಯು ಮೂಲತಃ ಶಿವನಯ್ಯನವರ ಮಗ ಮರಿಯಪ್ಪನವರಿಗೆ ಸೇರಿದ ಆಸ್ತಿ. ಮರಿಯಪ್ಪನಿಗೆ ದಾವಾ ಆಸ್ತಿ ಹೇಗೆ ಬಂತು ಎಂದರೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿದ್ದೀರಾ? ಎಂದರೆ ಇಲ್ಲ. ಸಾಕ್ಷಿಯು ಮುದುವರೆದು ದಾಖಲಾತಿ ಪಡೆಯಲು ಅರ್ಜಿ ಸಲ್ಲಿಸಿದ್ದೇವು ಆದರೆ ಯಾವುದೇ ದಾಖಲಾತಿ ಇಲ್ಲ ಎಂದು ತಹಶೀಲ್ದಾರ್ ಕಛೇರಿಯಿಂದ ಹಿಂಬರಹ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಯಾವುದೇ ದಾಖಲೆ ಇಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ. ಯಾವ ದಾಖಲೆಯ ಆಧಾರದ ಮೇಲೆ ಮರಿಯಪ್ಪನಿಗೆ ದಾವಾ ಆಸ್ತಿಯು ಬಂದಿದೆ ಎಂದು ಹೇಳುತ್ತಿದ್ದೀರಾ? ಎಂದರೆ ಸಾಕ್ಷಿಯು ಯಾವುದೇ ದಾಖಲೆ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯು

ಮರಿಯಪ್ಪನವರಿಗೆ ಬಂದಿದೆ ಎಂದು ತೋರಿಸಲು ನಮ್ಮ ಹತ್ತಿರ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ದಿನಾಂಕ:28.01.1958 ರಂದು ಗಂಗಯ್ಯನ ಮಗ ಮುತ್ತರಾಯಪ್ಪ ನವರ ಕಡೆಯಿಂದ ಬಂಡೆಪ್ಪ ಮತ್ತು ಬೊಮ್ಮಲಿಂಗಯ್ಯನಿಗೆ ಕ್ರಯ ಪತ್ರದ ಮೂಲಕ ದಾವಾ ಸ್ವತ್ತು ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಬಂಡೆಪ್ಪ ನೇ ಈ ಕೇಸಿನ ಪ್ರತಿವಾದಿಗಳ ತಂದೆ ಎಂದರೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿ ಪೂರ್ವಕ್ಕೆ ದೊಡ್ಡಮುತ್ತಯ್ಯನವರ ಸ್ವತ್ತು ಪಶ್ಚಿಮಕ್ಕೆ ಸಿಂಗಣ್ಣನವರ ಸ್ವತ್ತು ಉತ್ತರಕ್ಕೆ ಶ್ಯಾನುಬೋಗರವ ಇನಮತಿ ಅವರ ಸ್ವತ್ತು ಎಂದು ದಕ್ಷಿಣಕ್ಕೆ ನರಸಿಂಹಯ್ಯ ಮತ್ತು ದೊಡ್ಡ ಮುತ್ತಯ್ಯನವರ ಸ್ವತ್ತು ಎಂದು ನಮೂದಾಗಿದೆ ಎಂದರೆ ಗೊತ್ತಿಲ್ಲ. ಸದರಿ 1958ರ ಕ್ರಯ ಪತ್ರದ ಆಧಾರದ ಮೇಲೆ ಸದರಿ ಆಸ್ತಿಯ ಖಾತೆಯ 1998 ರಿಂದ ಇಲ್ಲಿಯವರೆಗೂ ಬಂಡ್ಯಪ್ಪನವರ ಹೆಸರಿನಲ್ಲಿ ಖಾತೆ ಬರುತ್ತಿದೆ ಎಂದರೆ ಸರಿಯಲ್ಲ. 1998ರಿಂದ ನರಸಿಂಹಯ್ಯನವರ ಹೆಸರಿನಲ್ಲಿ ಖಾತೆ ಬಂದಿದೆಯಾ? ಎಂದರೆ ಇಲ್ಲ. 1958ರ ಪೂರ್ವದಲ್ಲಿ ದಾವಾ ಆಸ್ತಿಯು ನರಸಿಂಹಯ್ಯನವರ ಹೆಸರಿನಲ್ಲಿ ಬರುತ್ತಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ನಿಪಿ.3 ರ ಕ್ರಯಪತ್ರದ ಆಧಾರದ ಮೇಲೆ ಬಂಡೆಪ್ಪನವರ ಹೆಸರಿಗೆ ಖಾತೆ ಬಂದಿದೆ ಎಂದು ನಮೂದಾಗಿದೆ ಎಂದರೆ ಸರಿ.

**ಮುಂದುವರಿದ ವಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಗಿದೆ.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.